ನಿಗ್ರಹ ದಳವನ್ನು ರಚಿಸಿದ್ದು, ಈ ವಡೆಯ ಬಲವರ್ಧನೆಗಾಗಿ 1 ಎಸ್ ಪಿ 2 ಡಿ ಎಸ್ ಪಿ 3 ಪಿ ಐ 40 ವೇದೆಗಳು, 6 ಮಹಿಳಾ ಪೇದೆಗಳು, 10 - ಎ ಪಿ ಸಿ ಚಾಲಕ ಹುದ್ದೆಗಳನ್ನು ಹೊಸದಾಗಿ ನೃಜಿಸಲಾಗಿದೆ

977 (1011) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಬೆಂಗಳೂರು ನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲಕ ಎಷ್ಟು ಹೊಸ ಬಡಾವಣೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ, ನಿವೇಶನಕ್ಕಾಗಿ ಬಂದಿದ್ದ ಅರ್ಜಿಗಳೆಷ್ಟು,

ಆ) ಬೆಂಗಳೂರಿನ ಸಂಚಾರಿ ವ್ಯವಸ್ಥೆ ಸರಿಪಡಿಸಲು ಎಷ್ಟು ಮೇಲು ರಸ್ತೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ, ಅತೀ ವೇಗದಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರ ಈ ಬಡಾವಣೆಗಳ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಯಾವ ರೀತಿ ಮಾಡಿದ್ದೀರಿ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ) ಅರ್ಕಾವತಿ ಬಡಾವಣೆ

ನಿವೇಶನಕ್ಕಾಗಿ 2,50,000 ಅರ್ಜಿಗಳು ಬಂದಿರುತ್ತವೆ

ಆ) ಬೆಂಗಳೂರು ನಗರದ ಸಂಚಾರಿ ವ್ಯವಸ್ಥೆಯನ್ನು ಸರಿವಡಿಸಲು ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ

1) ಹೊರ ವರ್ತುಲ ರಸ್ತೆಯಲ್ಲಿ ರಾಮಮೂರ್ತಿನಗರ ರಸ್ತೆ ಸಂದಿಸುವ ಸ್ಥಳದಲ್ಲಿ ಅಂಡರ್ ಪಾಸ್ ನಿರ್ಮಾಣ

2) ಮಾಗಡಿ ರಸ್ತೆ ಮತ್ತು ಕಾರ್ಡ್ ರಸ್ತೆ ಸಂದಿಸುವಲ್ಲಿ ಅಂಡರ್ ಪಾಸ್ ನಿರ್ಮಾಣ

3) ಮಾರತ್‌ಹಳ್ಳಿ ಬಳಿ ಬೆಂಗಳೂರು ಮತ್ತು ಸೇಲಂ ರೈಲು ಮಾರ್ಗಕ್ಕೆ ಮೇಲು ಸೇತುವೆ ನಿರ್ಮಾಣ

4) ಏರ್‌ಪೋರ್ಟ್ ರಸ್ತೆ ಮತ್ತು ಒಳ ವರ್ತುಲ ರಸ್ತೆ ಸಂದಿಸುವಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ

ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವತಿಯಿಂದ ಕೆಳಕಂಡ ಗ್ರೇಡ್ ಸಪರೇಟರ್ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ

1) ಮೈನೂರು ರಸ್ತೆ ಗಾಳಿ ಆಂಜನೇಯ ದೇವಸ್ಥಾನದ ಬಳಿ ಮೇಲು ಸೇತುವೆ

2) ಮಲ್ಲೇಶ್ವರಂ ವೃತ್ತದಲ್ಲಿ ಕೆಳಸೇತುವೆ

3) ಯಶವಂತಪುರ ವೃತ್ತದಲ್ಲಿ ಮೇಲು ಸೇತುವೆ ಹೊಸ ಬಡಾವಣೆಗಳಿಗೆ ನೀರು ಸರಬರಾಜು ವ್ಯವಸ್ಥೆ ಮಾಡಲು ಬೆಂಗಳೂರು ಜಲಮಂಡಳಿ ಈ ಕೆಳಗೆ ತಿಳಿಸಿರುವಂತೆ ಯೋಜನೆಗಳನ್ನು ರೂಪಿಸಿರುತ್ತದೆ

1) ಕಾವೇರಿ ನಾಲ್ಕನೇ ಹಂತ 1ನೇ ಘಟ್ಟದಿಂದ ಹೆಚ್ಚುವರಿಯಾಗಿ ದಿನಂಪ್ರತಿ 100 ದಶಲಕ್ಷ

2) ಕಾವೇರಿ ನಾಲ್ಕನೇ ಹಂತ 2ನೇ ಘಟ್ಟ ಅನುಷ್ಠಾನದಿಂದ ದಿನಂಪ್ರತಿ 500 ದಶಲಕ್ಷ